Amount allotted for Minor Irrigation in Belgaum Division.

*Q.—486. Smt. SUSHILABAI SHAH (Bagewadi).—

Will the Government be pleased to state :—

(a) the amount allotted during the year 1963-64 for Minor Irrigation in Belgaum Division ;

(b) out of which the amount spent so far (Districtwise information may be furnished) ?

A.—Sri ALUR HANUMANTHAPPA (Deputy Minister for Minor Irrigation).—

(a) Rs. 44.24 lakhs.

(b) Belgaum District—25.35 lakhs and Bijapur District—22.44 lakhs.

ಶ್ರೀಮತಿ ಸುಶೀಲಾಬಾಯಿ ಷಾ.—ಬಿಜಾಪುರ ಜಿಲ್ಲೆಯೊಳಗೆ ಕೆರೆಗಳಿಗೆ ಎಸ್ಟಿಮೇಟ್ ಆಗಿ ಮಂಜೂರಾದದ್ದು ಎಷ್ಟು ಇದೆ, ಬಾಪಿಗೆ ಅರ್ಜಿ ಎಷ್ಟು ಬಂದಿವೆ ಸ್ವಾಮಿ ?

†ಶ್ರೀ ಆಲೂರು ಹನುಮಂತಪ್ಪ.—ಅಲ್ಲಿ ಬಾವಿಗಳಿಗಾಗಿ ಹೆಚ್ಚಾಗಿ ಒತ್ತಾಯವಿವೆ. ಅವರು ಪ್ರಶ್ನೆ ಹಾಕಿರುವುದು 1963-64ನೆ ಸಾಲಿಗೆ ಸಂಬಂಧಪಟ್ಟಹಾಗೆ. ಆಗ ಎಲ್ಲ ಹಣವೂ ಖರ್ಚಾಗಿದೆ.

ಶ್ರೀಮತಿ ಸುಶೀಲಾಬಾಯಿ ಷಾ.—1964-65ನೆ ಸಾಲಿನೊಳಗೆ ಬಿಜಾಪುರ ಜಿಲ್ಲೆಯೊಳಗೆ ಎಸ್ಟಿಮೇಟ್ ಆಗಿದ್ದ ಎಲ್ಲ ಕೆರೆಗಳನ್ನೂ ತೆಗೆದುಕೊಂಡಿದ್ದೀರಾ, ಇನ್ನೂ ಉಳಿದಿವೆಯೇ ?

ಶ್ರೀ ಆಲೂರು ಹನುಮಂತಪ್ಪ.—1964-65ನೆ ಸಾಲಿನಲ್ಲಿ ಹೆಚ್ಚು ಕೆಲಸವನ್ನು ತೆಗೆದುಕೊಂಡಿಲ್ಲ.

Sri SIDDAIAH KASHIMATH.—In Belgaum Division you have given an allotment. What about Dharwar and Karwar.

ಶ್ರೀ ಆಲೂರು ಹನುಮಂತಪ್ಪ.—ಬೆಳಗಾಂ ಸರ್ಕಲ್‌ನಲ್ಲಿ ಮತ್ತು ಬಿಜಾಪುರ ಈ ಎರಡು ಜಿಲ್ಲೆಗಳ ವಿವರ ಮಾತ್ರ ಕೊಟ್ಟಿದೆ. ಧಾರವಾಡ ಸರ್ಕಲ್ ಬೇರೆ ಬರುತ್ತದೆ.

ಶ್ರೀಮತಿ ಸುಶೀಲಾಬಾಯಿ ಷಾ.—1963-64ನೆ ಇಸವಿಯಲ್ಲಿ ಕೆರೆ ಕೆಲಸ ಎಸ್ಟಿಮೇಟ್ ಆಗಿ ಮಂಜೂರಾಗಿದ್ದು ತೆಗೆದುಕೊಳ್ಳದೆ ಇರುವುದಕ್ಕೆ ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—1963-64ನೆ ಸಾಲಿನಲ್ಲಿ ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಯೊಳಗೆ ಸ್ಪಿಲ್‌ಓವರ್ ವರ್ಕ್ಸ್ ಇಲ್ಲಿ ಕೊಟ್ಟಿದ್ದೇವೆ. ಬೆಳಗಾಂ ಜಿಲ್ಲೆಯಲ್ಲಿ 32 ಕೆಲಸ 92 ಲಕ್ಷ ರೂಪಾಯಿನದು ಇದೆ, ಹೊಸ ಕೆಲಸ 112 ರೂಪಾಯಿನ 22 ಕೆಲಸಗಳಿವೆ. ಬಿಜಾಪುರದಲ್ಲಿ 1963-64ರಲ್ಲಿ ಸ್ಪಿಲ್‌ಓವರ್ ಕೆಲಸಗಳು 38, ಅದಕ್ಕೆ 113 ಲಕ್ಷ ರೂಪಾಯಿ ಅಂದಾಜಾಗಿದೆ, 34 ಹೊಸ ಕೆಲಸಗಳಿಗೆ 6 ಲಕ್ಷ 23 ಸಾವಿರ ರೂಪಾಯಿ ಅಂದಾಜು ಇಷ್ಟೆಲ್ಲ ಇದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಬೆಳಗಾಂ ವಿಭಾಗಕ್ಕೆ ಗೊತ್ತು ಮಾಡಿ ಕೊಟ್ಟಿದ್ದ ಹಣ 44.24 ಲಕ್ಷ ರೂಪಾಯಿ. ವೆಚ್ಚ ಮಾಡಿರುವುದು ಬೆಳಗಾಂ ಜಿಲ್ಲೆಗೆ 25. 5 ಲಕ್ಷ ರೂಪಾಯಿ ಮತ್ತು ಬಿಜಾಪುರ ಜಿಲ್ಲೆಗೆ 22.44 ಲಕ್ಷ ರೂಪಾಯಿ ಎಂದು ಹೇಳಿದಿರಿ. ಗೊತ್ತು ಮಾಡಿದ್ದಕ್ಕಿಂತ ಹೆಚ್ಚು ಹಣ ಖರ್ಚಾಗಿದೆ. ಆ ಹಣವನ್ನು ಯಾವ ರೀತಿ ಒದಗಿಸಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಅಲಾಟ್ ಆಗಿರತಕ್ಕದ್ದು 44.24 ರೂಪಾಯಿಗಳು ಅಷ್ಟು ಹಣವೂ ಖರ್ಚಾಗಿದೆ.

ಶ್ರೀ ಟಿ. ಮಾದಯ್ಯ ಗೌಡ.—ಎರಡು ಜಿಲ್ಲೆಗಳಲ್ಲಿ 1963-64ನೆ ಸಾಲಿನಲ್ಲಿ ಎಷ್ಟು ಕೆರೆಗಳು ಪೂರ್ಣಯಾಗಿವೆ ಮತ್ತು ಎಷ್ಟು ಎಕರೆ ಆಬಾದ ಗಿದೆ ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಮೂರು ಲಕ್ಷ ರೂಪಾಯಿನ ಮೂರು ಕೆಲಸಗಳು ಪೂರ್ಣಗೊಳ್ಳುತ್ತ ಬಂದಿವೆ. ಇದರಿಂದ 770 ಎಕರೆಗೆ ನೀರಾವರಿಯಾಗುತ್ತದೆ ಎಂದು ಅಂದಾಜು ಇದೆ. ಬಾಕಿ ಕೆಲಸಗಳು ವಿವಿಧ ಹಂತಗಳಲ್ಲಿ ನಡೆಯುತ್ತಿವೆ.

† Indicates that the remarks or speeches have not been revised by the member concerned.

ಶ್ರೀ ಎಸ್. ಎಂ. ಗುರಡ್ಡಿ.—ಬಿಜಾಪುರದಲ್ಲಿ ಇನ್ನೂ 8-10 ಕೆರೆಗಳ ಕೆಲಸ ಸಂತಿದೆ ಎಂಬುದಾಗಿ ಉತ್ತರ ಹೇಳಿದರು. 1965-66ನೇ ಸಾಲಿನಲ್ಲಿ ಅಥವಾ 1964-65ನೇ ಸಾಲು ಮುಗಿಯುವುದರೊಳಗೆ ಆ ಕೆಲಸವನ್ನು ಚಾಲ್ತಿ ಮಾಡುವುದಕ್ಕಾಗುತ್ತದೆಯೇ?

ಶ್ರೀ ಆಲೂರು ಹನುಮಂತಪ್ಪ.—ಈಗ ನಾನು ಮೊದಲೇ ಹೇಳಿದಂತೆ ಬೆಳಗಾಂನಲ್ಲಿ 1964-65ನೇ ಸಾಲಿನಲ್ಲಿ 32 ಕೆಲಸಗಳು ಬಿಜಾಪುರದಲ್ಲಿ 38 ಕೆಲಸಗಳು, 1963-64ನೇ ಸಾಲಿಗೆ ಸಂಬಂಧಪಟ್ಟಹಾಗೆ ಬೆಳಗಾಂನಲ್ಲಿ 29 ಕೆಲಸಗಳು, ಬಿಜಾಪುರದಲ್ಲಿ 3 ಕೆಲಸಗಳು ಇಷ್ಟು ಕೆಲಸಗಳಲ್ಲಿ ಕೆಲವು ರ್ಯಾಂಡ್ ಪೊಸಫಷನ್ ಗೋಸ್ಕರ ಹಾಗೂ ಒಂದೆರಡು ಕೆಲಸಗಳ ಅಂದಾಜು ವೆರಿಫಿಕೇಷನ್ನಿಗೋಸ್ಕರ ನಿಂತಿವೆ. ಬಾಕಿ ಕೆಲಸಗಳು ಆಗುತ್ತಾ ಇವೆ.

ಶ್ರೀ ಟಿ. ಮಾದಯ್ಯ ಗೌಡ.—ಬಾಕಿ ಇಲ್ಲದೇ ಇರುವ ಕೆಲಸಗಳು ಪೂರ್ತಿಯಾಗಿ ಎಷ್ಟು ಮುಗಿದಿವೆ, ಆ ಪ್ರಕಾರ ಎಷ್ಟು ಜನ ರೈತರು ಕೆಲಸ ಮಾಡುತ್ತಿದ್ದಾರೆ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಹಾಕಿದರೆ ವಿವರವಾಗಿ ಉತ್ತರ ಕೊಡುತ್ತೇನೆ. ಪ್ರಶ್ನೆ ಕೆ ಳಿರುವುದು ಎಂಡು ಜಿಲ್ಲೆಗಳಿಗೆ ಸಂಬಂಧಪಟ್ಟುವು.

ಶ್ರೀ ಎನ್. ಓ. ಸಾವಜಿ.—(ಮರಾಠಿ)

ಶ್ರೀ ಆಲೂರು ಹನುಮಂತಪ್ಪ.—ಕೆಲವು ಪ್ರದೇಶಗಳನ್ನು ಅಕ್ವಿಸಿಷನ್ ಆಕ್ಟ್ ಪ್ರಕಾರ ತೀವ್ರವಾಗಿ ಅಕ್ವೈರ್ ಮಾಡಿಕೊಳ್ಳುವ ಸಂದರ್ಭವಿತ್ತು. ಆ ವಿಚಾರದಲ್ಲಿ ಹೈಕೋರ್ಟಿನವರು ಒಂದು ಆದೇಶವನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಕೆಲವು ಪ್ರೊಸೀಂಡಿಗ್ಸನ್ನು ಮಾಡಬೇಕಾಗಿದ್ದರೆ ಅದಕ್ಕೆ ಸಂಬಂಧಪಟ್ಟ ಕೆಲವಾರು ರೂಲ್ಸ್‌ಗಳನ್ನು ಅನುಸರಿಸಬೇಕು. ಅದು ಸರ್ಕಾರದವರ ತೀವ್ರ ಪರಿಶೀಲನೆಯಲ್ಲಿದೆ. ಆದ್ದರಿಂದ ಅಕ್ವಿಸಿಷನ್‌ನ್ನು ಆದಷ್ಟು ಬೇಗ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಾದ ಪ್ರಶ್ನೆ ಸರ್ಕಾರದವರ ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಎಂ. ಗುರಡ್ಡಿ.—ಈಗ ಹೊಸವಾಗಿ ಕೆರೆಗಳ ಕಾಮಗಾರಿಯನ್ನು ತೆಗೆದುಕೊಳ್ಳದೆ ಇರುವುದರಿಂದ ಈಗ ಅಕ್ವಿಸಿಷನ್ ಸಲುವಾಗಿ ಕೆಲವು ಕೆರೆಗಳನ್ನು ಕಟ್ಟತಕ್ಕ ಕಾಮಗಾರಿ ಹಾಗೆಯೇ ನಿಂತಿದೆ. ಅವರಿಗೆ ಹಣ ಸಹಾಯ ಕೊಟ್ಟರೆ ಅಲ್ಲಿ ಕೆಲಸಕಾರ್ಯಗಳನ್ನು ಪ್ರಾರಂಭಮಾಡುತ್ತಾರಲ್ಲವೇ?

(ಉತ್ತರವಿಲ್ಲ)

Minor Irrigation Tanks in Nanjangud Taluk.

*Q.—492. Sri N. RACHAIAH (Nanjangud).—

Will the Government be pleased to state:—

(*a*) the number and names of minor irrigation tanks in Nanjangud Taluk that have been included in the master plan;

(*b*) the estimated cost of each one of them;

(*c*) when the work of these tanks would be commenced;

(*d*) whether they would start the said works early in view of the food scarcity?

*A.—Sri ALUR HANUMANTHAPPA (Deputy Minister for Minor Irrigation).—

(*a*) The Master plan is under preparation.

(*b*) This will be known after the master plan is finalised.

(*c*) and (*d*) Does not arise at this stage.

ಶ್ರೀ ಎನ್. ರಾಚಯ್ಯ.—ನಂಜನಗೂಡು ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಕೆರೆಗಳ ಮೈಕ್ರೋ ಪ್ಲಾನಿಗೆ ಎಷ್ಟು ಕೆರೆಗಳನ್ನು ಸೇರಿಸಿದ್ದಾರೆ? ಅದರ ಹೆಸರುಗಳನ್ನು ವಿವರವಾಗಿ ತಿಳಿಸುತ್ತೀರಾ?